ಶ್ರೀ ಸಿದ್ದಯ್ಯ ಕಾಶಿಮಠ್.– ಜನುವಾರುಗಳು ಸತ್ತಿವೆ. ಅವುಗಳ ಮಾಲೀಕರಿಗೆ ಸಬ್ಸಿಡಿ ಲೋನ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೆಲ್ಲ ರೂಲ್ಸ್ ಇವೆ. ಪ್ರವಾಹದಿಂದ, ನ್ಯಾಚುರಲ್ ಕಲಾಮಿಟೀಸಿಂದ ನಷ್ಟವಾದರೆ ಏನೇನು ಕೊಡಬೇಕು ಎಂದು ಪೂರ್ವದಿಂದಲೂ ಕೆಲವು ರೂಲ್ಸ್ ಇವೆ, ಆ ಪ್ರಕಾರವಾಗಿ ಕೊಡುತ್ತಾರೆ. ಈ ಪರಿಸ್ಥಿತಿಯಲ್ಲಿ ಇಷ್ಟು ನಷ್ಟವಾದರೂ ಕೂಡ ತಕ್ಷಣ ಪರಿಸ್ಥಿತಿ ಬಹಳ ಉತ್ತಮಗೊಂಡ ಹಾಗೆ ಕಾಣುತ್ತದೆ. ಜನ ಅಷ್ಟಾಗಿ ಒತ್ತಾಯ ಮಾಡಿದ ಹಾಗೆ ಕಾಣಲಿಲ್ಲ.

ಶ್ರೀ ಟಿ. ಕೆ. ಕಂಬಳಿ.—ಜಾನುವಾರುಗಳು ಸತ್ತಿರುವ ಬಗ್ಗೆ ಹೇಳಿದಿರಿ. ಕೆಲವು ಕಡೆ ಕುರಿ, ಮೇಕೆ ಇವುಗಳ ನಷ್ಟವಾಗಿದೆ. ಅವರಿಗೆ ಏನಾದರೂ ಸಹಾಯ ಮಾಡಲು ಯೋಚನೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.– ಅದಕ್ಕೆಲ್ಲ ರೂಲ್ಸ್ ಇದೆ, ಆ ಪ್ರಕಾರ ಕೊಡುತ್ತಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ಜನಗಳಿಂದ ಒತ್ತಾಯ ಬರಲಿಲ್ಲ ಎಂದು ಅಲ್ಲ ಒಳ್ಳೆಯ ಪರಿಸ್ಥಿತಿ ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ಅದು ಆ ಜನರ ಒಳ್ಳೆಯತನವನ್ನು ತೋರಿಸುತ್ತದೆ. ಮಾನ್ಯ ಮಂತ್ರಿಗಳಲ್ಲಿ ಕೆಲವು ವಿವರಗಳಿಲ್ಲದೇ ಇರುವುದರಿಂದ ಈ ಪ್ರಶ್ನೆಯನ್ನು ಮುಂದೆ ಯಾವಾಗಲಾದರೂ ತೆಗೆದುಕೊಳ್ಳಬೇಕು ಎಂದು ನಾನು ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

Quotas of Foodgrains to several Hotels and Restaurants.

*Q.—207. Sri SIDDAIAH KASHIMATH (Shirahatti).—

Will the Government be pleased to state :

whether the foodgrains, *i.e.*, rice-sugar and wheat products quotas are given to the several hotels and restaurants and lodging houses in the State ?

A.—Sri M. V. KRISHNAPPA (Minister for Revenue).—

1. Sugar is being given to the catering establishments depending upon the local conditions and requirements.

2. Rice and wheat are being given according to the local conditions and availability of the stocks.

ಶ್ರೀ ಸಿದ್ದಯ್ಯ ಕಾಶಿಮಠ.—ಫಲಹಾರ ಮಂದಿರಗಳಿಗೆ ಮತ್ತು ಭೋಜನಾಲಯಗಳಿಗೆ ಅಕ್ಕಿ, ಗೋಧಿ, ಸಕ್ಕರೆ ಇವುಗಳನ್ನು ಕೋಟಾ ಪ್ರಕಾರ ಕೊಡುತ್ತೀರಿ. ಆದರೆ ಅವರು ಮಾರತಕ್ಕ ಇಡ್ಲಿ, ಕಾಫಿ ಮುಂತಾದವುಗಳ ಮೇರೆ ಬೆರೆ ನಿಗದಿ ಮಾಡಲು ಏನಾದರೂ ಹತೋಟಿ ಸರ್ಕಾರಕ್ಕೆ ಇದೆಯೇ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಂಗಳೂರಿನಲ್ಲಿ ಮಾತ್ರ ಹೋಟೆಲ್ ಮಾಲೀಕರ ಅಸೋಸಿಯೇಷನ್ ಇದ್ದು ಎಲ್ಲ ಚೆನ್ನಾಗಿ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಅವರದೇ ಒಂದು ಸಹಕಾರ ಸಂಘ ಇದೆ. ಪ್ರತಿಯೊಬ್ಬರೂ ಕೊಡುವ ಮಾರಾಟ ತೆರಿಗೆಯ ಆಧಾರದ ಮೇರೆ ಅವರಿಗೆ ಕೋಟಾ ಕೊಡಲಾಗುತ್ತದೆ. ಅದಕ್ಕಾಗಿ ರೇಷನ್ ಕಾರ್ಡುಗಳನ್ನು ಕೊಟ್ಟಿದ್ದಾರೆ. ಮಾರಾಟ ತೆರಿಗೆಯ ಆಧಾರದ ಮೇರೆ ಸಕ್ಕರೆಯನ್ನು ಕೊಡುತ್ತಾರೆ. ಮಿಕ್ಕ ವನ್ತುಗಳು ಸರ್ಕಾರದವರ ಹತ್ತಿರ ಇದ್ದಾಗ ಡೆಪ್ಯುಟಿ ಕಮಿಷನರಿಗೆ ಅಲಾಟ್ ಮಾಡಲಾಗುತ್ತದೆ. ಅವರು ಸ್ಥಳದ ಪರಿಸ್ಥಿತಿ ಮತ್ತು ಅಗತ್ಯಗಳನ್ನು ನೋಡಿಕೊಂಡು ಅವರ ಹತ್ತಿರ ಬಂದಿರುವ ದಾಸ್ತಾನನ್ನು ನೋಡಿಕೊಂಡು ಹಂಚುತ್ತಾರೆ. ಬೆಂಗಳೂರಿನಲ್ಲಿ ಮಾತ್ರ ರೆಗ್ಯುಲರ್ ಕೋಟಾ ಕೊಡುತ್ತಾರೆ.

ಶ್ರೀ ಸಿದ್ದಯ್ಯ ಕಾಶಿಮಠ್.—ಅಕ್ಕಿ, ಗೋಧಿ ಇವುಗಳನ್ನು ಅವರಿಗೆ ಸರ್ಕಾರ ಕೊಡುವಾಗ ಅವರು ಮಾರತಕ್ಕ ದಿನಸಿಗಳ ಮೇಲೆ ಹೆಚ್ಚು ಬೆಲೆ ಹಾಕದಂತೆ ಮಾಡಲು ಸರ್ಕಾರಕ್ಕೆ ಏನಾದರೂ ಹತೋಟಿ ಇದೆಯೇ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮದ್ರಾಸ್ ಮತ್ತು ಕೆಲವು ಕಡೆ ಮಾರಾಟದ ಬೆರೆಯನ್ನು ಗೊತ್ತು ಮಾಡಿದ್ದಾರೆ, ಇಲ್ಲಿ ಅಂಥ ಪರಿಸ್ಥಿತಿ ಬಂದಿಲ್ಲವಾದ್ದರಿಂದ ನಾವು ಬೆರೆಗಳನ್ನು ಗೊತ್ತುಮಾಡಿಲ್ಲ.

Sri K. P. GADAG.—May I know if Government have received complaints or reports of hotels being closed down owing to non-availability of either rice or wheat?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಮದ್ರಾಸಿನಲ್ಲಿ ಆಯಿತು. ಇಲ್ಲಿ ಆಗಲಲ್ಲ. That did not happen here. Whenever there was trouble they approached us and we gave them enough of grains.

ಶ್ರೀ ಬಿ. ಚನ್ನಬೈರೇಗೌಡ.—ಬೆಂಗಳೂರಿನಲ್ಲಿ ಮಾತ್ರ ಆಹಾರ ಪದಾರ್ಥಗಳನ್ನು ಕೊಡುತ್ತಿದ್ದೀರಿ. ಗ್ರಾಮಾಂತರ ಪ್ರದೇಶಗಳಿಗೆ ಯಾವ ಕೋಟಾ ಕೊಡುತ್ತಾ ಇಲ್ಲ. ಅಲ್ಲಿಯೂ ಕೊಡುವ ಹಾಗೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಡೆಪ್ಯುಟಿ ಕಮಿಷನರಿಗೆ ಅದನ್ನು ಅಲಾಟ್ ಮಾಡುತ್ತೀದ್ದೇವೆ. ಅವರಿಗೆ ಸಾಮಾನ್ಯವಾಗಿ ಹೇಳುತ್ತಿದ್ದೇವೆ. ಹೊಟೇಲಿನವರಿಗೂ ಕೊಡುವುದು ಉತ್ತಮವೆಂದು ಹೇಳಿದ್ದೇವೆ. ಸಕ್ಕರೆಯನ್ನು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರುತ್ತಿದ್ದಾರೆಂದು ಹೋಟಲಿನವರು ತಮ್ಮ ಹೊಟೇಲುಗಳನ್ನು ಮುಚ್ಚುವುದಕ್ಕೆ ಆಗುತ್ತಿಲ್ಲ. ಸಕ್ಕರೆ ಕೊಳ್ಳಬೇಕಾಗುತ್ತದೆ. ಆದ್ದರಿಂದ ಅವರು ಆ ರೀತಿ ಕೊಂಡರೆ ನಾವೇ ಅವರಿಗೆ ಬ್ಲಾಕ್ ಮಾರ್ಕೆಟ್ಟಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಹೋಟೆಲುಗಳವರಿಗೆ ಕೊಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ. ಡೆಪ್ಯುಟಿ ಕಮಿಷನರಿಗೆ ಸ್ವಾತಂತ್ರ್ಯ ಕೊಟ್ಟಿದ್ದೇವೆ. ಅವರು ರೋಕರ್ ಕಂಡೀಷನ್ಸ್ ನೋಡಿಕೊಂಡು ಕೊಡುತ್ತಿದ್ದಾರೆ.

Sri R. S. HEGDE.—Has it come to the notice of Government that sugar has been allotted on the basis of 1951 Census so much so the allotments are too small?

Sri M. V. KRISHNAPPA.—The excess population is always considered in making allotments. If Hon'ble Member feels that North Kanara has not enough sugar, we will examine the matter.

ಶ್ರೀ ಸಿ. ಆರ್. ರಂಗೇಗೌಡ.—ಮಾನ್ಯ ಸಚಿವರು ಉತ್ತರ ಹೇಳುವಾಗ ಬೆಂಗಳೂರು ಜಿಲ್ಲೆಯಲ್ಲಿ ಹೋಟಲಿನವರಿಗೆ ಅವರು ಯೂನಿಯನ್ ಮಾಡಿಕೊಂಡಿದ್ದರಿಂದ ಕಾರ್ಡುಗಳನ್ನು ಕೊಟ್ಟಿದ್ದಾರೆ. ಹಾಗೆಯೇ ತಾಲ್ಲೂಕು ಪ್ರದೇಶಗಳಲ್ಲಿಯೂ ಯೂನಿಯನ್ ಮಾಡಿಕೊಂಡರೆ ಮಾತ್ರ ದವಸ ಧಾನ್ಯಗಳನ್ನು ಕೊಡುತ್ತೇವೆಂದು ಸೂಚನೆ ಕೊಟ್ಟಿದ್ದೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರೂ ಸಹ ಹಾಗೆಯೇ ಮಾಡಬೇಕಾಗುತ್ತದೆ. ಈಗಾಗಲೇ ಬೆಂಗಳೂರಿನಲ್ಲಿ ಜಿಲ್ಲಾವಾರು ಹೊಟಲುಗಳ ಅಸೋಸಿಯೇಷನ್ ಮಾಡಿಕೊಂಡು ಎಲ್ಲಾ ಕಡೆಯೂ ಕಾರ್ಡುಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈಗಾಗಲೇ ಮೈಸೂರು, ಚಿತ್ರದುರ್ಗ, ಶಿವಮೊಗ್ಗ ಮುಂತಾದ ಪ್ರದೇಶಗಳಲ್ಲಿರುವಕ್ಕೆ ಕೆಲವು ಹೋಟಲಿನವರು ಮಾರಾಟ ತೆರಿಗೆಯನ್ನು ಕೊಡುತ್ತಿದ್ದಾರೆ. ಅದರ ಒಂದು ಆಧಾರದ ಮೇಲೆ ಅವರಿಗೆ ಕೊಡುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಮೈಸೂರು ಸಂಸ್ಥಾನದಲ್ಲಿಯೂ ಕೂಡ ಅನೇಕ ಪಟ್ಟಣಗಳಲ್ಲಿ ಹೋಟಲುಗಳು ಸಾಕಷ್ಟು ಆಹಾರಪದಾರ್ಥಗಳು ದೊರಕದೇ ಇದ್ದುದರಿಂದ ಬಂದ್ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಮತ್ತು ಎರಡನೆಯದಾಗಿ ನಿಗದಿಯಾದ ಬೆರೆಗೆ ಬೆಂಗಳೂರಿನಲ್ಲಿ ಮಾತ್ರ ಹೋಟಲುಗಳಿಗೆ ಆಹಾರ ಪದಾರ್ಥಗಳನ್ನು ಸಾಕಷ್ಟು ಸರಬರಾಜು ಮಾಡುತ್ತಿದ್ದೇವೆಂದು ಬೇರೆ ಹೇಳಿದ್ದೀರಿ. ಆದರೆ ಚಿಕ್ಕ ಚಿಕ್ಕ ಗ್ರಾಮಗಳಿಗೆ ಏಕೆ ಈ ವ್ಯವಸ್ಥೆಮಾಡಲಲ್ಲ? ಗ್ರಾಮಗಳಿಗೂ ಮತ್ತು ಪಟ್ಟಣಗಳಿಗೂ ಈ ರೀತಿಯಾಗಿ ವ್ಯತ್ಯಾಸಮಾಡಿದ್ದೀರಿ, ಕಾರಣವೇನು?

ಶ್ರೀ ಎಂ. ವಿ. ಕೃಷ್ಣಪ್ಪ.—ನಿಟಿಗೆ ಮಾನ್ಯ ಸದಸ್ಯರಂತಹ ಅನೇಕ ಜನರು ಬರುತ್ತಿರುತ್ತಾರೆ. ಬೆಂಗಳೂರಿನ ಹೋಟಲುಗಳವರಿಗೆ ಆಹಾರ ಪದಾರ್ಥಗಳನ್ನೂ ಕೊಟ್ಟರೆ ಅನುಕೂಲ. ಹೊರಗಿನವರು ವಿಶೇಷವಾಗಿ ಇಲ್ಲಿಗೆ ಬರುವುದರಿಂದ ಅವರಿಗೆ ದಿನವು ಊಟದ ವ್ಯವಸ್ಥೆ ಇಲ್ಲ ಮಾಡಬೇಕಾಗಿದೆ ಆ ರೀತಿಯಾಗಿ ವ್ಯವಸ್ಥೆ ಮಾಡುವುದು ನಮ್ಮ ಕರ್ತವ್ಯ. ಆದರೆ ಬೆಂಗಳೂರಿನ ಜನಗಳು ವಿಶೇಷವಾಗಿ ಇಂತಹ ಹೋಟಲುಗಳಲ್ಲಿ ದಿನವು ಊಟ ಮಾಡುವುದಿಲ್ಲ. ನಮ್ಮ ಕಂಟ್ರೋಲರ್ ಪೂರಾ ಜಿಲ್ಲಾಧಿಕಾರಿಗಳ ಮೇಲೆ ಬರುತ್ತದೆ. ಅದರಿಂದ ಅವರಿಗೆ ರೋಕರ್ ಕಂಡೀಷನ್ಸ್ ನೋಡಿಕೊಂಡು ಅಲಾಟ್ ಮಾಡಿ ಎಂಬುದಾಗಿ ಹೇಳಿದ್ದೇವೆ.

ಶ್ರೀ ಎಸ್. ಪಿ. ಹಾಯಿದೆ.—ಕಾರವಾರ ಜಿಲ್ಲೆಯಲ್ಲಿ ಕಳೆದ ಡಿಸೆಂಬರ್ 16ಕ್ಕೆ ಅಲ್ಲಿನ ಹೋಟಲು ಗಳು ಬಂದಾಗಿದ್ದುದರಿಂದ ಅಲ್ಲಿರುವ ಜನಗಳಿಗೆ ಬಹಳ ತೊಂದರೆಯಾಯಿತು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಂಥಾದ್ದು ನನ್ನ ಗಮನಕ್ಕೆ ಬಂದಿಲ್ಲ. ನಾರ್ತ್ ಕನರಾದವರು ಅವ ರನ್ನು ಬೆದರಿಸಿ ಅಂಗಡಿಗಳನ್ನು ಮುಚ್ಚಿದ್ದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಬ್ಲ್ಯಾಕ್ ಮಾರ್ಕೆಟ್ಟನ್ನು ತಡೆಯುವುದಕ್ಕೋಸ್ಕರ ಈಗ ಹೋಟಲುಗಳವರಿಗೆ ಕೊಡುತ್ತಿರುವ ಕಡಿಮೆ ಕೋಟಾವನ್ನು ಏನಾದರೂ ಮಾಡಿ ಹೆಚ್ಚಿಸಿ ಬ್ಲ್ಯಾಕ್ ಮಾರ್ಕೆಟ್ಟನ್ನು ತಪ್ಪಿಸಿ ಮುಂದಾದರು- ಅವರಿಗೆ ಹೆಚ್ಚು ಕೋಟಾ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ. ಅಲ್ಲದೆ ಇನ್ನು 7-8 ದಿವಸಗಳಲ್ಲಿ ಜಿಲ್ಲಾಧಿಕಾರಿಗಳ ಸಮ್ಮೇಳನ ಕರೆದಾಗ ಅವರಿಗೆ ಮತ್ತೊಂದು ಸಾರಿ ಹೋಟಲು ಗಳ ರಿಕ್ವೈರ್‌ಮೆಂಟ್ಸ್ ನೋಡಿಕೊಂಡು ಅಲಾಟ್ ಮಾಡಬೇಕೆಂದು ಹೇಳುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡ.—ಬೆಂಗಳೂರಿನ ರೂರಲ್ ಡಿಸ್ಟ್ರಿಕ್ಟುಗಳಲ್ಲಿರುವವರಿಗೆ ಸ್ಪೆಷಲ್ ಕೋಟಾ ಕೊಡುತ್ತಾ ಇಲ್ಲ ಅದ್ದರಿಂದ ಊಟದ ಹೋಟಲುಗಳಲ್ಲಿ ಪ್ಲೇಟ್ ಮೀಲ್ಸ್‌ನ್ನಾದರೂ ಕೊಡುವಂತಹ ಒಂದು ಆದೇಶವನ್ನು ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ಪೆಷಲ್ ಕೋಟಾವನ್ನು ಯಾರಿಗೂ ಕೊಡುತ್ತಾ ಇಲ್ಲ ಈಗಾ ಗಲೇ ಕೊಟ್ಟಿರುವ ಹೋಟಲುಗಳವರಿಗೆ ಅವರ ನಾರ್ಮಲ್ ರಿಕ್ವೈರ್‌ಮೆಂಟ್ಸ್ ನೋಡಿಕೊಂಡು ಕೊಡಿ ಎಂಬುದಾಗಿ ಜಿಲ್ಲಾಧಿಕಾರಿಗಳಿಗೆ ಹೇಳುತ್ತೇವೆ.

ಶ್ರೀ ಎಸ್. ಪಿ. ಹಾಯಿದೆ.—ಕಾರವಾರ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳಿಗೆ ಈ ರೀತಿ ಸೂಚನೆ ಕೊಡುವ ಹಾಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೋಟಲುಗಳಲ್ಲಿ ಸರಿಯಾಗಿ ನೋಡಿಕೊಳ್ಳದೇ ಹೋದರೆ ಬಹಳ ತೊಂದರೆಯಾಗುತ್ತದೆ ಮುಖ್ಯವಾಗಿ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲಿನ ಅನೇಕ ಹೋಟಲಿನವರು ಕೆಲವು ಸಂದರ್ಭಗಳಲ್ಲಿ ಮಾರಾಟತೆರಿಗೆಯನ್ನು ಕೊಟ್ಟಿರುವುದಿಲ್ಲ. ಅಂತಹವರಿಗೆ ಆಹಾರ ಪದಾರ್ಥ ಗಳು ಸಿಕ್ಕುವುದಿಲ್ಲ ಮಿಕ್ಕವರಿಗೆ ಕೊಡುವ ಹಾಗೆ ವ್ಯವಸ್ಥೆಮಾಡುತ್ತೇವೆ.

ಶ್ರೀ ಸಿ. ಆರ್. ರಂಗೇ ಗೌಡ.—ಈಗತಾನೇ ಮಂತ್ರಿಗಳು ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಯೂನಿಯನ್ ಮಾಡಿಕೊಂಡರೆ ಆಹಾರ ಪದಾರ್ಥಗಳನ್ನು ಸಾಕಷ್ಟು ರೀತಿಯಲ್ಲಿ ಸರಬರಾಜು ಮಾಡುತ್ತೇವೆಂದು ಹೇಳಿದ್ದಾರೆ. ಮಿಕ್ಕ ಕಡೆಗಳಲ್ಲಿ ತಾಲ್ಲೂಕುಗಳಲ್ಲಿ ಯೂನಿಯನ್ ಮಾಡಿಕೊಳ್ಳ ದ್ದರಿಂದ ಆಹಾರಧಾನ್ಯಗಳನ್ನು 6 ತಿಂಗಳಿಗಾಗುವಷ್ಟು ಬೇರೆ ಕಡೆಯಿಂದ ತರತಕ್ಕ ವ್ಯವಸ್ಥೆಮಾಡಿ ರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರೀತಿ ಕೆಲವು ಸಂದರ್ಭಗಳಲ್ಲಿ ಆಗಿರಬಹುದು ಆದರೆ ಬೆಂಗ ಳೂರು ರೂರಲ್ ಡಿಸ್ಟ್ರಿಕ್ಟ್‌ನಲ್ಲಿ ಆ ಬಗ್ಗೆ ದೀರ್ಘವಾಗಿ ವಿಚಾರಮಾಡಿ ಸಹಾಯ ಮಾಡುತ್ತಿದ್ದಾರೆ

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗ್ಗೆ ಕೆಲವು ದಿನಗಳಿಂದ ಕೋಲಾರ ಮತ್ತು ತುಮಕೂರು ಜಿಲ್ಲೆಗಳಿಗೆ ಅಕ್ಕಿ ಬೇರೆ ಜಿಲ್ಲೆಗಳಿಂದ ಬರುತ್ತಾ ಇದೆ. ಈಗ ಡಿಫಿಸಿಟ್ ಜಿಲ್ಲೆಗಳಲ್ಲಿ ಅಕ್ಕಿ ಮತ್ತು ಗೋಧಿಗೆ ಬಹಳ ಅಭಾವವಿರುವುದರಿಂದ ಅಂತಹ ಪ್ರದೇಶಗಳಿಗೆ ಹೆಚ್ಚಿಗೆ ಆ ಆಹಾರಪದಾರ್ಥಗಳನ್ನು ಸರಬರಾಜುಮಾಡುವುದಕ್ಕೆ ವ್ಯವಸ್ಥೆಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಪ್ರೊಕ್ಯೂರ್‌ಮೆಂಟ್ ಆಫ್ ಪ್ಯಾಡಿ ವಸೂಲು ನಡೆಯುತ್ತಾ ಇದೆ. ಕೆಲವು ನರ್ಪ್ಲಸ್ ಡಿಸ್ಟ್ರಿಕ್ಟುಗಳಿಂದ ಬತ್ತ ವಿಶೇಷವಾಗಿ ಹೊರಗಡೆ ಹೋಗುವುದನ್ನು ನಿಲ್ಲಿಸದೇ ಇದ್ದರೆ ತುಂಬಾ ತೊಂದರೆಯಾಗುತ್ತದೆ. ಅದು ಫ್ರೀಯಾಗಿ ಹೋಗುತ್ತಿದೆ. ಅದನ್ನು ಕಂಟ್ರೋ ಲ್‌ಗೆ ತರಬೇಕಾಗಿದೆ. ಅಲ್ಲದೆ 4-5 ಜಿಲ್ಲೆಗಳಲ್ಲಿ ವಸೂಲಿ ಇನ್ನೂ ನಡೆಯಬೇಕಾಗಿದೆ ಈಗ 10ದಿನ ಗಳ ನಿರ್ಬಂಧ ಬೇರೆ ಹಾಕಿರುವುದರಿಂದ ಮಾನ್ಯ ಸದಸ್ಯರು ಹೇಳಿದ ಹಾಗೆ ಡಿಫಿಸಿಟ್ ಜಿಲ್ಲೆಗಳಿಗೆ ನರ್ಪ್ಲಸ್ ಜಿಲ್ಲೆಗಳಿಂದ ಅದರಲ್ಲೂ ಅಭಾವವಿರುವ ಪ್ರದೇಶಗಳಿಗೆ ಬತ್ತವನ್ನು ಸರಬರಾಜುಮಾಡುವ ವ್ಯವಸ್ಥೆಯನ್ನು ಸರ್ಕಾರದವರು ಅಲ್ಲಲ್ಲಿ ಮಾಡುತ್ತಿದ್ದಾರೆ.

ಶ್ರೀ ಜಿ. ರಾಮೇಗೌಡ.—ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿಯೂ ಐಡೆಂಟಿಫಿಕೇಷನ್ ಕಾರ್ಡುಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಐಡೆಂಟಿಫಿಕೇಷನ್ ಕಾರ್ಡುಗಳನ್ನು ಅಭಾವ ಬಂದಾಗ ಕೊಡು ತ್ತೇವೆ. ಈಗ ಬೆಳೆ ಬಂದಿದೆ. ಆದ್ದರಿಂದ ಅನೇಕ ಕಡೆಗಳಲ್ಲಿ ಈಗ ಕಾರ್ಡುಗಳನ್ನು ಕೊಡುತ್ತಾ ಇಲ್ಲ. ಇನ್ನೂ ಕಷ್ಟಕಾಲ ಮುಂದೆ ಬರಬಹುದು. ಈಗಲೇ ಎಲ್ಲಾ ಕಡೆಗಳಲ್ಲಿಯೂ ಐಡೆಂಟಿಫಿಕೇಷನ್ ಕಾರ್ಡುಗಳನ್ನು ಕೊಟ್ಟರೆ ಕಷ್ಟ ಕಾಲಕ್ಕೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಬೆಳಿಗ್ಗೆ ಅದರ ಇವರದು ಒಂದೊಂದು ಅಜ್ಜಿ. ಇಂತಿಂಥಕಡೆ ಅಭಾವವಿದೆ ಎಂಬುದನ್ನು ಇವರು ಪೂರ್ಣವಾಗಿ ಅರ್ಥಮಾಡಿಕೊಳ್ಳುವುದಕ್ಕೆ ಇವರಿಗೆ ಇನ್ನೆಷ್ಟು ಕಾಲ ಬೇಕು ? ದೇಶದ ಜನ ಯಾವುದನ್ನು ಅಳವಡಿಸಬೇಕೆಂದು ಇವರು ಹೇಳುವುದಕ್ಕಾಗುತ್ತದೆ ?

Mr. SPEAKER.—So many ideas are mixed up. The Hon'ble Member may reframe the question.

ಶ್ರೀ ಸಿದ್ದಯ್ಯ ಕಾತೀಮಠ.—ಹೋಟಲುಗಳ ಮಾಲೀಕರಿಗೆ ಅವರು ಮಾರಾಟ ಪೆರಿಗೆ ಕೊಡುವ ಒಂದು ಆಧಾರದ ಮೇಲೆ ಕೊಡಬೇಕು ಎಂಬುದಾಗಿ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನೇನೋ ಕೊಟ್ಟಿದ್ದೀರಿ. ಆದರೆ ಹಾಸ್ಟಲುಗಳನ್ನು ನಡೆಸುವವರು ಮಾರಾಟ ತೆರಿಗೆಯನ್ನು ಕೊಡದೇ ಇರುವುದರಿಂದ ಅಂತಹವರಿಗೆ ಯಾವ ರೀತಿ ಕೊಡುವುದಕ್ಕೆ ಪ್ರೊಜೆಕ್ಷನ್ ಮಾಡುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಾಸ್ಟಲು ಹುಡುಗರಿಗೆ ಬಹಳ ರಿಯಾಯತಿಯಿಂದ ಕೊಡಬೇಕೆಂದು ಸೂಚನೆ ಕೊಟ್ಟಿದೆ. ಹುಡುಗರು ಗರಾಜ್ ಮಾಡಿದರೆ ಕಷ್ಟವೆಂದು ಓದುವ ಹುಡುಗರಿಗೆ ವ್ಯವಸ್ಥೆ ನರಿಬಾಗಿರಬೇಕೆಂದು ಮತ್ತು ಅವರ ರಿಕ್ವೈರ್‌ಮೆಂಟ್ ಬಹಳ ಕಡಿಮೆ ಇರುವುದರಿಂದ ಅದರಲ್ಲೂ ಒಂದೊಂದು ಊರಿಗೆ ಕೇವಲ 7-8 ಹಾಸ್ಟಲುಗಳು ಇರುವುದರಿಂದ ಅಲ್ಲಿರತಕ್ಕ ಹುಡುಗರಿಗೆ ಒಳ್ಳೆಯ ಅಕ್ಕಿಯನ್ನು ಸಾಧ್ಯವಾದಷ್ಟು ಬೇಗ ಕೊಡಿ ಎಂಬುದಾಗಿ ಹೇಳಿದ್ದೇವೆ.

ಬಿ. ಭಾಸ್ಕರಶೆಟ್ಟಿ.—ಸ್ವಾಮಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ 3-4 ತಿಂಗಳುಗಳಿಂದಲೂ ಅಕ್ಕಿಯ ಅಭಾವ ಜಾಸ್ತಿಯಾಗಿದೆ, ಹೀಗಿರುವಾಗ ಅಲ್ಲಿಂದ ಬೇರೆ ಕಡೆಗೆ ಬತ್ತ ಮತ್ತು ಅಕ್ಕಿ ಹೋಗುತ್ತಿದೆ. ಇದನ್ನು ತಡೆಗಟ್ಟುವ ಹಾಗೆ ಸರ್ಕಾರದವರು ಏನಾದರೂ ಒಂದು ಏರ್ಪಾಡು ಮಾಡಬೇಕು ನಮ್ಮ ಜಿಲ್ಲೆಯಲ್ಲಿ ಅಕ್ಕಿಯಿಲ್ಲದೆ ಜನಗಳು ಬಹಳ ಕಷ್ಟಪಡುತ್ತಿದ್ದಾರೆ. ಒಂದು ಕೆ.ಜಿ. ಅಕ್ಕಿಗೆ 1 ರೂಪಾಯಿ 10 ನಯಾಪೈಸಾ ಆಗಿದೆ. ಬೇರೆ ಕಡೆಯಿಂದರಾದರೂ ಅಕ್ಕಿಯನ್ನು ತರೋಣ ಎಂದರೆ ಒಂದು ಡಿಸ್ಟ್ರಿಕ್ಟಿನಿಂದ ಇನ್ನೊಂದು ಡಿಸ್ಟ್ರಿಕ್ಟಿಗೆ ತರುವ ಹಾಗೆ ಇಲ್ಲ. ಇದರಿಂದ ಅಲ್ಲಿನ ಜನಗಳಿಗೆ ಬಹಳ ತೊಂದರೆ ಆಗಿದೆ, ಅದ್ದರಿಂದ ಈ ಬಗ್ಗೆ ಸರ್ಕಾರದವರು ಏನಾದರೂ ಒಂದು ಏರ್ಪಾಟನ್ನು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಪ್ರಶ್ನೆಗೂ ಅದಕ್ಕೂ ಸಂಬಂಧವಿಲ್ಲ. ಆದರೂ ಸಹ ನಾನು ಒಂದು ವಿಷಯವನ್ನು ಈ ಮಾನ್ಯ ಸಭೆಯವರ ಗಮನಕ್ಕೆ ತರಬೇಕೆಂದಿದ್ದೇನೆ. ಅದೇನೆಂದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರದ ವಿಷಯದಲ್ಲಿ ಒಂದು ನರಿಯಾದ ವ್ಯವಸ್ಥೆಯನ್ನು ಮಾಡಬೇಕೆಂದಿದ್ದೇವೆ. ಮಂಗಳೂರಿನಲ್ಲಿ ಈ ತಿಂಗಳು 8-10ನೇ ತಾರೀಖಿನ ವೇಳೆಗೆ ಇನ್‌ಫಾರ್ಮರ್ ರೇಷನಿಂಗ್ ಪದ್ಧತಿಯನ್ನು ಜಾರಿಗೆ ತರಬೇಕೆಂದಿದ್ದೇವೆ. ಒಂದು ತರಹ ರೇಷನಿಂಗ್ ಕಾರ್ಡುಗಳ ಮೂಲಕ ಅಲ್ಲಿನ ಜನರಿಗೆ ರೇಷನ್ ಕೊಡುವುದಕ್ಕೆ ಏರ್ಪಾಟು ಮಾಡುತ್ತಿದ್ದೇವೆ.

Works sanctioned under Minor Irrigation Scheme in Krishnarajpet Taluk

*Q.—300. Sri N. NANJE GOWDA (Krishnarajpet).—

Will the Government be pleased to state :—

(*a*) the number of works sanctioned under the minor irrigation scheme in Krishnarajpet Taluk from January 1964 to December 1964 ;

(*b*) out of them the number of works for which provision has been made in the budget ; the works for which provision has not been made in the budget ;

(*c*) the date on which estimates of these works were prepared (hobli-wise information may be supplied) ?

A.—Sri ALUR HANUMANTHAPPA (Deputy Minister for Minor Irrigation).—

(*a*) One.

(*b*) One ; Reply to the latter part does not arise.

(*c*) 6th December 1963—Bookinakere Hobli—1.